**2ನೇ ಹೆಚ್ಚುವರಿ ನ್ಯಾಯಿಕ ದಂಡಾಧಿಕಾರಿಗಳು, ಗೋಕಾಕ ಇವರ ನ್ಯಾಯಾಲಯ**
**ಸಾಃ ಗೋಕಾಕ.**

**ಸಿ.ಸಿ ನಂಃ 2109/2013**
**ಸಿಡಬ್ಲೂ ಃ 1 ಪಿಡಬ್ಲೂ ಃ 1**

**ಸಾಕ್ಷಿದಾರರ ಹೆಸರು** ಃ- ಬಸವ್ವ ನಿಂಗಪ್ಪ ನಂದಿ

**ವಯಸ್ಸು** ಃ- 45 ವರ್ಷ

**ಉದ್ಯೋಗ** ಃ- ವ್ಯವಸಾಯ

**ಸಾಕೀನ** ಃ- ಮಾಲದಿನ್ನಿ

**ದಿಃ 15-02-2018 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ: ಸ.ಸ.ಅ. ರವರಿಂದ ;**

ಆರೋಪಿತರ ಪರಿಚಯ ಇದೆ. ಚಾಸಾ 4 ನನ್ನ ಗಂಡ. ಚಾಸಾ 5 ನನ್ನ ಮಗ. ಸುಮಾರು 5 ವರ್ಷಗಳ ಹಿಂದೆ ಬೆಳಗ್ಗೆ 06-00 ಘಂಟೆಗೆ ಜಗಳ ಆಯಿತು. ನಾವು ಮತ್ತು ಆರೋಪಿತರು ನಮ್ಮ ಹೊಲದಲ್ಲಿನ ಒಂದೇ ಮನೆಯಲ್ಲಿ ಇದ್ದೇವೆ. ನಮ್ಮ ಮನೆಯ ಮುಂದಿನ ಅಂಗಳದಲ್ಲಿ ನಮ್ಮ ಮತ್ತು ಆರೋಪಿತರಿಗೆ ಸೇರಿದ ಆಡುಗಳು ಇದ್ದವು. ಅವುಗಳನ್ನು 1 ಮತ್ತು 2 ನೇ ಆರೋಪಿತರು, ಗೋಕಾಕ ಸಂತೆಗೆ ಮಾರಲು ಓಯ್ಯುತಿದ್ದರು. ಆಗ ನಾನು ಅವು ಒಟ್ಟು ಕುಟುಂಬಕ್ಕೆ ಸೇರಿದ ಆಡುಗಳಾಗಿದ್ದು, ಒಯ್ಯ ಬೇಡಿರಿ ಅಂದಿದ್ದಕ್ಕೆ 1 ರಿಂದ 5 ನೇ ಆರೋಪಿತರು ಸೇರಿಕೊಂಡು ಸಿಕ್ಕ ಸಿಕ್ಕ ರೀತಿಯಲ್ಲಿ ಬಯ್ದು, ನನ್ನ ತಲೆಗೆ ಕುರುಪಿ ಹಿಡಿಕೆಯಿಂದ ಹೊಡೆದರು. ತಲೆ ಒಡೆಯಿತು. ಚಾಸಾ 4 ಮತ್ತು 5 ಸ್ಥಳದಲ್ಲಿ ಇದ್ದರು ಅವರಿಗೂ ಸಹಿತ ಆರೋಪಿತರು ಬೈದರು. ನಂತರ ನಾನು ಠಾಣೆಗೆ ಬಂದು ಮಾಹಿತಿ ನೀಡಿದೆನು. ನಂತರ ಸರ್ಕಾರಿ ಆಸ್ಪತ್ರೆ ಗೋಕಾಕಕ್ಕೆ ಹೋಗಿ ಚಿಕಿತ್ಸೆ ಪಡೆದಿದ್ದೇನೆ. ನಾನು ನೀಡಿದ ಮಾಹಿತಿಯನ್ನು ನೋಡುತ್ತಿದ್ದು ಅದನ್ನು ನಿಪಿ-1 ಅಂತಾ, ಸಾಕ್ಷಿಯ ಹೆಬ್ಬಟ್ಟಿನ ಸಹಿಯನ್ನು ನಿಪಿ-1 ಎ ಅಂತಾ ಗುರುತಿಸಲಾಯಿತು. ನಿಪಿ-1 ನ್ನು ನೀಡಿದ ನಂತರ ಪೋಲಿಸರು ಘಟನಾ ಸ್ಥಳಕ್ಕೆ ಬಂದಿದ್ದರು. ಆ ದಿನ ಹೊಡೆ ಬಡೆ ಮಾಡಿದ ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. 1, 2, ಮತ್ತು 4 ನೇ ಆರೋಪಿತರು ಈಗ ನ್ಯಾಯಾಲಯದ ಮುಂದೆ ಇದ್ದಾರೆ. 3 ಮತ್ತು 4 ನೇ ಆರೋಪಿತರು ಗೈರು ಹಾಜರಿದ್ದು, ಅವರ ಪರ ವಕೀಲರು ಗುರುತಿಸುವಿಕೆಯ ಬಗ್ಗೆ ಯಾವುದೇ ತಕರಾರು ಇಲ್ಲ ಎಂದು ಅರ್ಜಿ ಸಲ್ಲಿಸಿದ್ದು ಸದರಿ ಷರತ್ತಿಗೆ ಒಳಪಟ್ಟು ಅರ್ಜಿಯನ್ನು ಪುರಸ್ಕರಿಸಲಾಗಿದೆ. 3 ಮತ್ತು 4 ನೇ ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ.

**ಪಾಟೀ ಸವಾಲು ಃ ಎಸ್ ವಿ ಎಸ್ ಆರೋಪಿ ಪರ ವಕೀಲರವರಿಂದ ;**

ನಾನು ಶಾಲೆ ಕಲಿತಿಲ್ಲ. ಕಾರಣ ಘಟನೆ ದಿನಾಂಕ ಗೊತ್ತಿಲ್ಲ. ಮುಂದೆ ಹುಣ್ಣಿಮೆ ಇತ್ತು. ಘಟನೆ ಬೆಳಗಿನ

ಸಮಯದಲ್ಲಿ ಆಗಿತ್ತು. ನಮ್ಮ ಮತ್ತು ಆರೋಪಿತರ ಮಧ್ಯೆ ಸಿವಿಲ್ ಪ್ರಕರಣ ಇದೆ ಎಂದರೆ ಸರಿ. 1 ನೇ ಆರೋಪಿತ ಸ್ವಂತಗಳಿಸಿದ ಆಸ್ತಿಯ ಮೇಲೆ ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ನಾವೇ ಆಡುಗಳನ್ನು ಒಯ್ಯುವಾಗ ಆರೋಪಿತರು ಬೇಡ ಅಂದಿದ್ದಕ್ಕೆ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಘಟನೆ ನಡೆದ ಹೊಲದ ರಿ.ಸ.ನಂಬರ ಹೇಳಲು ಬರುವುದಿಲ್ಲ. ಗೋವಿನ ಜೋಳ ಬೆಳೆ ಇತ್ತು. ಘಟನೆ ಆದಾಗ ಬೆಳೆ ಮನುಷ್ಯರಿಗಿಂತ ಎತ್ತರವಾಗಿತ್ತು. ಬೆಳೆಯ ಇನ್ನೊಂದು ಕಡೆ ಯಾರಾದರೂ ಹೋದರೆ ಗೊತ್ತಾಗುವುದಿಲ್ಲ ಎಂದರೆ ಸರಿ. ಘಟನೆ ಆದ ದಿನ ಯಾವ ಬಣ್ಣದ ಸೀರೆ ಹಾಕಿದ್ದೆನು ಎಂದು ನೆನಪಿಲ್ಲ. 2, 4 ಮತ್ತು 5 ನೇ ಆರೋಪಿತರು ಯಾವ ಬಣ್ಣದ ಬಟ್ಟೆಗಳನ್ನು ಹಾಕಿಕೊಂಡಿದ್ದರು ಎಂದು ನನಗೆ ನೆನಪಿಲ್ಲ. ಮನೆ ಹೊಲದಲ್ಲಿರುವ ಕಾರಣ ಮನೆಯ ನಂಬರ ಇಲ್ಲ. 1 ನೇ ಆರೋಪಿತ ಮೊದಲು ಬಂದು ನಂತರ ಎಲ್ಲರೂ ಸೇರಿ ಹೊಡೆದರು. ಸ್ವಲ್ಪ ರಕ್ತ ನೆಲದ ಮೇಲೆ ಬಿದ್ದಿತ್ತು. ನಾನು ಆಸ್ಪತ್ರೆಯಲ್ಲಿ ಇದ್ದ ಕಾರಣ ಪೊಲೀಸರು ಅದನ್ನು ನೋಡಿದರು ಅಥವಾ ಇಲ್ಲ ಅಂತಾ ಗೊತ್ತಿಲ್ಲ. ನನ್ನ ರವಿಕೆ ಮತ್ತು ಸೀರೆಯ ಮೇಲೆ ರಕ್ತ ಬಿದ್ದಿತ್ತು. ಅದನ್ನು ಪೊಲೀಸರಿಗೆ ಹೇಳಿಲ್ಲ ಎಂದರೆ ಸರಿ. ಘಟನಾ ಸ್ಥಳದ ಹತ್ತಿರ ರಸ್ತೆ ಇದೆ ಎಂದರೆ ಸರಿಯಲ್ಲ. ಅಲ್ಲಿ ಜನರು ಹೋಗಿ ಬಂದು ಮಾಡುತ್ತಿರುತ್ತಾರೆ ಎಂದರೆ ಸರಿಯಲ್ಲ. ಮನೆಯ ಅಕ್ಕ-ಪಕ್ಕ ಯಾವುದೇ ಮನೆಗಳು ಇಲ್ಲ. ನನಗೆ ಹೊಡಿ ಬಡಿ ಮಾಡಿದ್ದನ್ನು ಮಾಯವ್ವ ಮತ್ತು ಯಮನವ್ವ ಮತ್ತು ಚಾಸಾ 5, 6 ನೋಡಿದ್ದಾರೆ. ಮಾಯವ್ವ ಮತ್ತು ಯಮನವ್ವ 1 ನೇ ಆರೋಪಿತನ ಮೇಲೆ ಪಾಲು ವಾಟ್ನೆ ದಾವೆ ಹಾಕಿದ್ದಾರೆ ಎಂದರೆ ಸರಿ. ಮಾಯವ್ವ ಮಾಲದಿನ್ನಿಯಲ್ಲಿ ಇರುತ್ತಾಳೆ. ಯವನವ್ವ ಪಾಮಲದಿನ್ನಿಯಲ್ಲಿ ಇರುತ್ತಾಳೆ. ಆದರೆ ಆ ದಿನ ನನ್ನ ಅತ್ತೆಗೆ ಆರೋಗ್ಯ ಸರಿ ಇಲ್ಲದ ಕಾರಣ ನೋಡಲು ಬಂದಿದ್ದರು. ಮರು ದಿನ ಬೆಳಗ್ಗೆ ಆಸ್ಪತ್ರೆಗೆ ಹೋಗಿದ್ದೆನು. ಯಾವುದೇ ಘಟನೆ ನಡೆದಿಲ್ಲ, ನಾನು ಹೊಲದಲ್ಲಿ ಕೆಲಸ ಮಾಡುವಾಗ ಬಿದ್ದು ಗಾಯ ಮಾಡಿಕೊಂಡಿದ್ದು ಅದನ್ನು ದುರುಪಯೋಗ ಪಡಿಸಿಕೊಂಡು ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ಹೊಡೆಬಡೆ ಮಾಡಿಲ್ಲ, ಅವಾಚ್ಯ ಬೈದಿಲ್ಲ ಎಂದರೆ ಸರಿಯಲ್ಲ. ನನಗೆ ಯಾವುದೇ ಗಾಯವಾಗಿಲ್ಲ ಎಂದರೆ ಸರಿಯಲ್ಲ. ಹೇಗಾದರೂ ಮಾಡಿ ಪಾಲು ಪಡೆಯ ಬೇಕೆಂದು ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ :** ಇಲ್ಲ.

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೆ. ಕೇ. ಸರಿ ಇದೆ,

ಸಹಿ/-

(ಮೋಹನ ಸದಾಶಿವ ಪೋಳ)

**2ನೇ ಹೆ.ದಿ.&ನ್ಯಾ.ದಂ., ಗೋಕಾಕ.**